# ವಿದೇಶಕ್ಕೆ ಹಾರಿದ ಕಾಂಗ್ರೆಸ್ ಶಾಸಕರು

■ **ವಿಕ ಸುದ್ದಿಲೋಕ** ಬೆಂಗಳೂರು

ಆಡಳಿತ ಪಕ್ಷದ ಶಾಸಕರು ಮತ್ತು ಮೇಲ್ಮನೆ ಸದಸ್ಯರ ತಂಡ ಮಂಗಳವಾರ ರಾತ್ರಿ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಪ್ರವಾಸ ಕೈಗೊಂಡಿರುವುದು ಅಧಿಕಾರ ಹಸ್ತಾಂತರ ಗೊಂದಲದ ನಡುವೆ ಕುತೂಹಲ ಮೂಡಿಸಿದೆ.

ಪುಟ್ಟರಂಗಶೆಟ್ಟಿ, ಹಂಪನಗೌಡ ಬಾದರ್ಲಿ, ದೇವೇಂದ್ರಪ್ಪ, ಪರಿಷತ್ ಸದಸ್ಯರಾದ ವಸಂತ ಕುಮಾರ್, ನಾಗರಾಜ ಯಾದವ್ ಸೇರಿದಂತೆ ಹಲವು ಶಾಸಕರು ಪ್ರವಾಸ ಕೈಗೊಂಡಿದ್ದಾರೆ. ಕುಟುಂಬ ಸದಸ್ಯರೊಂದಿಗೆ ಪ್ರವಾಸಕ್ಕೆ ತೆರಳಿರುವ ಶಾಸಕರು, ಮಾ.3 ರಂದು ವಾಪಸಾಗುವ ನಿರೀಕ್ಷೆಯಿದೆ.

ಈ ನಡುವೆ ಶಾಸಕರ ವಿದೇಶ ಪ್ರವಾಸದ ಬಗ್ಗೆ ನಗರದಲ್ಲಿ ಮಂಗಳವಾರ ಪ್ರತಿಕ್ರಿಯಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ''ಶಾಸಕರ ವಿದೇಶ ಪ್ರವಾಸ ಸ್ಥಳೀಯ ವಿಷಯವಾಗಿದ್ದು, ನಾನು ಮಾತನಾಡುವುದು ಸರಿಯಲ್ಲ, ಸಿಎಂ ಹಾಗೂ ಡಿಸಿಎಂಗೆ ಈ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುವ ಅವಕಾಶವಿದೆ,'' ಎಂದು ಹೇಳಿದ್ದಾರೆ.

**ಮಾಹಿತಿ ಇಲ್ಲ ಎಂದ ಡಿಸಿಎಂ**

''ಶಾಸಕರ ವಿದೇಶ ಪ್ರವಾಸದ ಬಗ್ಗೆ ಮಾಹಿತಿ ಇಲ್ಲ, ಈ ಪ್ರವಾಸ ವೈಯಕ್ತಿಕವೋ ಅಥವಾ ಬೇರೆಯವರು ಕಳಿಸುತ್ತಿದ್ದಾರೋ ಗೊತ್ತಿಲ್ಲ. ಪಕ್ಷದ ಅಧ್ಯಕ್ಷನಾಗಿ ಇದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ,'' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದ್ದಾರೆ.

## ನನಗೆ ಮಾಹಿತಿಯೇ ಇಲ್ಲ ಎಂದ ಡಿಸಿಎಂ


ಹಂಪನಗೌಡ


ಪುಟ್ಟರಂಗ ಶೆಟ್ಟಿ


ನಾಗರಾಜ ಯಾದವ್


ದೇವೇಂದ್ರಪ್ಪ

## ಪ್ರವಾಸ ಅಗತ್ಯವಿರಲಿಲ್ಲ

**ದಾವಣಗೆರೆ:** ''ರಾಜ್ಯ ಕಾಂಗ್ರೆಸ್ ಸರಕಾರ ಬಜೆಟ್ ಮಂಡನೆಗೆ ಸಿದ್ಧತೆ ನಡೆಸಿರುವ ಈ ಸಂದರ್ಭದಲ್ಲಿ ಶಾಸಕರು ವಿದೇಶ ಪ್ರವಾಸ ಹೋಗುವ ಅವಶ್ಯಕತೆ ಇರಲಿಲ್ಲ'' ಎಂದು ಚನ್ನಗಿರಿ ಶಾಸಕ ಬಸವರಾಜು ವಿ. ಶಿವಗಂಗಾ ಅಭಿಪ್ರಾಯಪಟ್ಟಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ''ಶಾಸಕರಿಗೂ ಅವರದ್ದೇ ವೈಯಕ್ತಿಕ ಬದುಕು ಇರುತ್ತದೆ. ವಿದೇಶ ಪ್ರವಾಸಕ್ಕೆ ಹೋಗಬೇಡಿ ಎಂದು ಅವರನ್ನು ತಡೆಯುವುದು ತಪ್ಪಾಗುತ್ತದೆ. ಆದರೆ, ಸರಕಾರ ಬಜೆಟ್ ಮಂಡಿಸುವ ಸಂದರ್ಭದಲ್ಲಿ ವಿದೇಶ ಪ್ರವಾಸ ಬೇಡವಾಗಿತ್ತು,'' ಎಂದರು.

**ನಾಯಕತ್ವ ಯಥಾಸ್ಥಿತಿ:** ಈ ಮಧ್ಯೆ ಪವರ್ ಶೇರಿಂಗ್ ಗೊಂದಲದ ಕುರಿತು ಮಾತನಾಡಿರುವ ಮಾಜಿ ಸಚಿವ ಕೆ.ಎನ್. ರಾಜಣ್ಣ ''ಸಿದ್ದರಾಮಯ್ಯ ಅವರು ಗಟ್ಟಿಯಾಗಿದ್ದಾರೆ. ನಾಯಕತ್ವ ಬದಲಾವಣೆಯ ಯಾವ ಸಾಧ್ಯತೆಗಳೂ ಇಲ್ಲ'' ಎಂದು ಹೇಳಿದ್ದಾರೆ.

''ಸಿದ್ದರಾಮಯ್ಯ ಗಟ್ಟಿಯಾಗಿದ್ದಾರೆ ಮತ್ತು ವಿಶ್ವಾಸದಲ್ಲಿದ್ದಾರೆ. ಬಜೆಟ್ ಮಂಡಿಸುತ್ತಿದ್ದಾರೆ ಎಂದ ಮೇಲೆ ಅಷ್ಟು ವಿಶ್ವಾಸವಿದೆ ಎಂದು ಅರ್ಥವಲ್ಲವೇ? ಯಥಾಸ್ಥಿತಿ ಮುಂದುವರಿಯುತ್ತದೆ ಎಂಬುದು ಸ್ಪಷ್ಟ'' ಎಂದರು.

**ಅವರು ಯಾಕೆ ವಿದೇಶ ಪ್ರವಾಸ ಹೋಗ್ತಿದ್ದಾರೆಂದು ಗೊತ್ತಿಲ್ಲ. ಅವರವರ ಹಣದಲ್ಲಿ ಅವರು ಎಲ್ಲಿ ಬೇಕಾದರೂ ಹೋಗಬಹುದು. ಆಸ್ಟ್ರೇಲಿಯಾ ಸೇರಿದಂತೆ ಎಲ್ಲ ಕಡೆ ಕೃಷಿಯಿದೆ, ಅಧ್ಯಯನಕ್ಕೆ ಹೋಗಿರಲೂಬಹುದು**

**-ಡಾ. ಜಿ ಪರಮೇಶ್ವರ್** ಸಚಿವ

## ವೈಯಕ್ತಿಕ ವೆಚ್ಚದ ಪ್ರವಾಸಕ್ಕೆ ಅಭ್ಯಂತರವಿಲ್ಲ



**ಹಾವೇರಿ:** ''ಸರಕಾರದಿಂದ ಶಾಸಕರು ವಿದೇಶ ಪ್ರವಾಸಕ್ಕೆ ಹೊರಟರೆ ನಮ್ಮ ಅನುಮತಿ ಪಡೆಯಬೇಕಾಗುತ್ತದೆ. ಆದರೆ ವೈಯಕ್ತಿಕ ಖರ್ಚಿನಲ್ಲಿ ಹೋದರೆ ನಮ್ಮ ಅಭ್ಯಂತರ ಇಲ್ಲ'' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ''ಐವರು ಪರಿಷತ್ ಸದಸ್ಯರು ಸೇರಿದಂತೆ 22 ಶಾಸಕರು ವಿದೇಶ ಪ್ರವಾಸಕ್ಕೆ ಹೋಗುತ್ತಿದ್ದಾರೆಂದು ಮಾಧ್ಯಮಗಳಲ್ಲಿ ನೋಡಿದೆ. ಸದ್ಯ ಭೋಜೇಗೌಡ ಎಂಬುವವರು ದಕ್ಷಿಣ ಆಫ್ರಿಕಾಗೆ ಹೊರಡಲು ಅನುಮತಿ ಕೇಳಿದ್ದಾರೆ. ಈ ಬಗ್ಗೆ ಫೈಲ್ ಬಂದ ಮೇಲೆ ತೀರ್ಮಾನ ಮಾಡುತ್ತೇನೆ'' ಎಂದರು.